ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗಿದೆ. ಇದಕ್ಕಾಗಿ ರೂ.5.00 ಲಕ್ಷ ಅನುದಾನವು ಬಿಡುಗಡೆಯಾಗಿದೆ.

ವಿಜಯಪುರ (ನಗರ) ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 6 ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ.

ವಿವಿಧ ಯೋಜನೆಗಳ ಮಂಜೂರಾತಿ

2511(2761); ಶ್ರೀ ಮಕಬುಲ್ ಎಸ್. ಬಾಗವಾನ್ (ವಿಜಯಪುರ ನಗರ)

ಅ) ವಿಜಯಪುರ (ನಗರ) ಮತಕ್ಷೇತ್ರಕ್ಕೆ ವಿವಿಧ ಯೋಜನೆಗಳಿಗೆ ಮಂಜೂರಾದ ಅನುದಾನವೆಷ್ಟು;

ಆ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಯಾವ ಯೋಜನಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಕೈಗೊಂಡಿರುವಂತಹ ಕಾಮಗಾರಿಗಳು ಯಾವ ಹಂತದಲ್ಲಿವೆ, ಅವುಗಳ ರೂಪುರೇಷೆಗಳೇನು;

ಡಾ॥ ಎಂ.ಹೆಚ್. ಅಂಬರೀಷ್ (ಮಾನ್ಯ ವಸತಿ ಸಚಿವರು)

ಅ) ಅನುದಾನವನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡದೆ ಲೆಕ್ಕ ಶೀರ್ಷಿಕೆವಾರು ಹಂಚಿಕೆ ಮಾಡಲಾಗುತ್ತದೆ. ವಿಜಯಪುರ ನಗರಕ್ಕೆ ಕಳೆದ ಮೂರು ವರ್ಷಗಳಲ್ಲಿ ನೀಡಲಾದ 556 ಮನೆಗಳಿಗೆ ಘಟಕ ವೆಚ್ಚಕ್ಕನುಸಾರವಾಗಿ ರೂ. 667.20 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಆ) ನಗರ ಪ್ರದೇಶದ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ವಾಜಪೇಯಿ **ನಗರ ವಸತಿ ಯೋಜನೆಯನ್ನು** ಅನುಷ್ಠಾನಗೊಳಿಸಲಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ 556 ಮನೆಗಳಿಗೆ ಪ್ರಗತಿಗನುಸಾರವಾಗಿ ರೂ. 88.41 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಇ) ಕೈಗೊಂಡಿರುವ 556 ಮನೆಗಳ ಪೈಕಿ 31 ಮನೆಗಳು ಮುಕ್ತಾಯಗೊಂಡಿದ್ದು, 239 ಮನೆಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಉಳಿದ 286 ಮನೆಗಳು ಇನ್ನೂ ಪ್ರಾರಂಭವಾಗಬೇಕಾಗಿದೆ.

ಸದರಿ ಯೋಜನೆಯ ರೂಪರೇಷೆಗಳು ಕೆಳಗಿನಂತಿವೆ:

ಯೋಜನೆಯ ಹೆಸರು	**ವಾಜಪೇಯಿ ನಗರ ವಸತಿ ಯೋಜನೆ (ನಗರ ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದ ವಸತಿರಹಿತರಿಗೆ ವಸತಿ ಕಲ್ಪಿಸುವ ಯೋಜನೆ).**
ಪ್ರತಿ ಮನೆಯ ಘಟಕ ವೆಚ್ಚ	ಪ್ರತಿ ಮನೆಯ ಘಟಕ ವೆಚ್ಚ ರೂ. 2,00,000/–ಗಳಾಗಿದ್ದು, ಸದರಿ ಮೊತ್ತದಲ್ಲಿ ರೂ. 1,20,000/– ಸರ್ಕಾರದ ಸಹಾಯಧನ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ. 30,000/– ಗಳ ಫಲಾನುಭವಿಯ ವಂತಿಗೆಯನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು. ಉಳಿದ ರೂ. 50,000/– ಬ್ಯಾಂಕ್ ಸಾಲ/ಫಲಾನುಭವಿಯ ವಂತಿಕೆಯ ರೂಪದಲ್ಲಿರುತ್ತದೆ.
ಮೀಸಲಾತಿ	ಪರಿಶಿಷ್ಟ ಜಾತಿ–30%, ಪರಿಶಿಷ್ಟ ಪಂಗಡ–10%, ಅಲ್ಪಸಂಖ್ಯಾತರಿಗೆ–10%, ಸಾಮಾನ್ಯ ವರ್ಗದವರಿಗೆ–50%, ಒಟ್ಟು ಮೀಸಲಾತಿಯಲ್ಲಿ ಅಂಗವಿಕಲರಿಗೆ–3%.
ಅರ್ಹತೆ ಮತ್ತು ಆಯ್ಕೆಯ ವಿವರಗಳು	ನಗರ ಪ್ರದೇಶದಲ್ಲಿ, ವಾಜಪೇಯಿ ವಸತಿ ಯೋಜನೆಯಡಿ ಈ ಕೆಳಕಂಡ ಮಾನ ದಂಡಗಳನ್ನು ಅನುಸರಿಸಲಾಗುತ್ತಿದೆ. • ಅರ್ಜಿದಾರರು ಮಹಿಳಾ ಮತ್ತು ಪುರುಷ ಫಲಾನುಭವಿಗಳು ವಸತಿ ಪಡೆಯಲು ಅರ್ಹರಾಗಿರುತ್ತಾರೆ. • ಅರ್ಜಿದಾರರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ಮಾಸಿಕ ಆದಾಯವು ರೂ. 7300/– ಕ್ಕಿಂತ ಕಡಿಮೆ ಇರಬೇಕು (ವಾರ್ಷಿಕ ರೂ. 87600/– ಗಳು)

- ಅರ್ಜಿದಾರರು ವಸತಿ ರಹಿತ ಅಥವಾ ಗುಡಿಸಲುವಾಸಿಯಾಗಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು ಹಾಗೂ ಇನ್ನಿತರೆ ಯೋಜನೆ/ಇಲಾಖೆಯಿಂದ ವಸತಿ ಸೌಲಭ್ಯ ಪಡೆದಿರಬಾರದು.
- **ಫಲಾನುಭವಿಗಳ ಆಯ್ಕೆ:** ಈಗಾಗಲೇ ಸಮೀಕ್ಷೆ ಮೂಲಕ ನಿವೇಶನ ರಹಿತರ ಪಟ್ಟಿ ಹಾಗೂ ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿಯನ್ನು ಸಮೀಕ್ಷೆ ಮೂಲಕ 2003 ರಲ್ಲಿ ತಯಾರಿಸಲಾಗಿದ್ದು, ಆ ಪಟ್ಟಿಯಲ್ಲಿ ಇನ್ನೂ ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದಾಗ್ಗೆ ಪರಿಷ್ಕೃತ ಪಟ್ಟಿಯನ್ನು ನಗರಸಭೆಗಳು ತಯಾರಿಸುತ್ತಿದ್ದು ಈ ಪಟ್ಟಿಯನ್ನು ಪ್ರತಿ ಪಟ್ಟಣ ಪ್ರದೇಶಕ್ಕೆ ಪ್ರತ್ಯೇಕವಾಗಿ ನೇಮಕ ಆಗಿರುವ ಆಶ್ರಯ ಸಮಿತಿಗೆ ಒದಗಿಸಲಾಗುತ್ತದೆ. ಹಾಗೂ ಆಶ್ರಯ ಸಮಿತಿಯು ಈ ಪಟ್ಟಿಯ ಆಧಾರದ ಮೇಲೆ ಫಲಾನುಭವಿಗಳ ಆಯ್ಕೆ ಮಾಡುತ್ತದೆ.
- ಮನೆ ನಿರ್ಮಾಣಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಮನೆ ನಿರ್ಮಾಣದ ವೆಚ್ಚವು ಸರ್ಕಾರದಿಂದ ನೀಡಲಾಗುವ ಸಹಾಯಧನದ 4 ಪಟ್ಟಿಗಿಂತ ಅಧಿಕವಾಗಿರಬಾರದು. ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ

	ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.
ಮನೆ ನಿರ್ಮಾಣ ಮಾಡುವ ಕ್ರಮ	• ಫಲಾನುಭವಿಯೇ ತನ್ನ ಸ್ವಂತ ಮನೆಯನ್ನು ಸ್ಥಳೀಯವಾಗಿ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಿಕೊಳ್ಳಬಹುದು. ಮನೆಯ ಪ್ರಗತಿಯನ್ನು ಜಿಪಿಎಸ್ ಮೂಲಕ ನಿಗಮದ ವೆಬ್‌ಸೈಟಿನಲ್ಲಿ ಆನ್‌ಲೈನ್ ಮೂಲಕ ನಮೂದಿಸಿ, ಸದರಿ ಛಾಯಾಚಿತ್ರಗಳನ್ನು ನಿಗಮದಲ್ಲಿ ಆಡಿಟ್ ಮಾಡಿ ಓಕೆಯಾದ ಛಾಯಾಚಿತ್ರಗಳಿಗೆ ಮಾತ್ರ ಪ್ರಗತಿಯಾಧಾರದನ್ವಯ ಅನುದಾನವು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗುವುದು. ಅಥವಾ • ಫಲಾನುಭವಿಯು ಇಚ್ಛಿಸಿದಲ್ಲಿ, ನಿಗಮವು ನೇಮಿಸುವ ಯಾವುದಾದರೊಂದು ಸಂಸ್ಥೆಯ ಮೂಲಕ ಮನೆ ಕಟ್ಟಿಸಿಕೊಡಲಾಗುವುದು. (ನಿರ್ಮಿತಿ ಕೇಂದ್ರ, ಭೂಸೇನಾ ನಿಗಮ, ಜಿಲ್ಲಾ ಪಂಚಾಯಿತಿ, ತಾಂತ್ರಿಕ ವಿಭಾಗ, ಇತ್ಯಾದಿ). ಇಂತಹ ಸಂದರ್ಭದಲ್ಲಿ ಪ್ರಗತಿಯನ್ವಯ ಅನುದಾನವನ್ನು ನಿರ್ಮಾಣ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು.